# ಜೋಡಿ ಹಕ್ಕಿಗಳ ಹನಿಮೂನ್



ನನ್ನ ಮದುವೆಯ ಬಗ್ಗೆ ಮಾತುಕತೆಗಳು ನಡೆದ ಮೇಲೆ ನನ್ನ ತಂದೆ ತಾಯಿ, ಸರೋಜಳ ಮದುವೆಯನ್ನು ಬೇಗನೆ ಮುಗಿಸಲು ಆಲೋಚಿಸ ತೊಡಗಿದರು. ನನ್ನ ತಂಗಿ ಸರೋಜ ಕೂಡ ಓದಿದ್ದರೆ ಯಾರಾದರು ಸರಕಾರಿ ಕೆಲಸದಲ್ಲಿರುವ ಹುಡುಗನನ್ನು ಹುಡುಕಬಹುದಾಗಿತ್ತು. ಮನೆಯಲ್ಲಿ ನಾನು ಒಬ್ಬ ಮಾತ್ರ ಓದಿಕೊಂಡು ಒಳ್ಳೆ ಕೆಲಸಕ್ಕೆಂದು ಬೆಂಗಳೂರು ಸೇರಿಕೊಂಡುಬಿಟ್ಟೆ. ಆ ದಿನ ಶಾರದಾ ಮ್ಯಾಡಮ್ ಹೇಳಿದ ಮಾತಿನಲ್ಲಿ ತಪ್ಪೇನೂ ಇರಲಿಲ್ಲ. ಅವರು ಸರಿಯಾಗಿಯೇ ಹೇಳಿದ್ದರು. ಈಗ ಏನು ಮಾಡಲು ಸಾಧ್ಯ? ನನ್ನ ತಂದೆ ತಾಯಿ, ದೊಡ್ಡಪ್ಪ ಎಲ್ಲರೂ ಸೇರಿ ಸರೋಜಳಿಗೆ ಹುಡುಗನನ್ನು ಹುಡುಕುವ ಕಾರ್ಯದಲ್ಲಿ ತೀವ್ರವಾಗಿ ತೊಡಗಿಸಿಕೊಂಡರು. ನನ್ನ ಅತ್ತೆ ಮಗನೊಬ್ಬನಿದ್ದು ಅವನು ಸರೋಜಳಿಗಿಂತ ಚಿಕ್ಕವನಾಗಿದ್ದ. ಕೊನೆಗೂ ಅಲ್ಲಿ ಇಲ್ಲಿ ಹುಡುಕಿದ ಮೇಲೆ ಪಕ್ಕದ ಊರಿನಲ್ಲಿ ನಮ್ಮ ಸಂಬಂಧಿಗಳ ಪೈಕಿ ಒಬ್ಬ ಹುಡುಗ ಬೆಂಗಳೂರಿನ ವಿಧಾನಸೌಧದಲ್ಲಿ ಉಪ ಸಿಬ್ಬಂದಿ ಆಗಿ ಕೆಲಸ ಮಾಡುತ್ತಿರುವುದಾಗಿ ತಿಳಿದುಬಂದಿತು. ನನ್ನ ತಂದೆ ಆ ಹುಡುಗನನ್ನು ಭೇಟಿ ಮಾಡುವಂತೆ ತಿಳಿಸಿದರು. ನಾನು, ನನ್ನ ಮಾವನಿಗೆ ಹೇಳಿ ಅವರು, ನಾನು ಇಬ್ಬರೂ ವಿಧಾನಸೌಧ ಎಲ್ಲಾ ಹುಡುಕಿ ಅವನನ್ನು ಹಿಡಿದುಕೊಂಡು